ಲೋಕದ ಅನುಭವವನ್ನು ಪಡೆಯಲು ಬಂದಿರುವ ಜೀವವು ಗೊತ್ತಿದ್ದೋ ಗೊತ್ತಿಲ್ಲದೆಯೋ ಹೊತ್ತುಕೊಂಡ ಎಲ್ಲವನ್ನೂ ಕಕ್ಕಿಬಿಡುವ ಭರದಲ್ಲಿ ಮುಗ್ಧತೆಯನ್ನು ಪರದೆಯ ಹಿಂದೆ ಸರಿಸಿ ಹಲವು ಬಗೆಯ ಪಾತ್ರಗಳನ್ನು ಜೀವನದ ರಂಗಸ್ಥಳದಲ್ಲಿ ಪ್ರದರ್ಶಿಸಿಬಿಟ್ಟಿರುತ್ತದೆ.

■ ಸಂತೋಷ್ ಅನಂತಪುರ

# ಮುಗ್ಧತೆ ಎನ್ನುವ ತುಳಸೀದಳ

ಹೇಳಬೇಕು ಎಂದುಕೊಂಡದ್ದನ್ನು ಹೇಳಬೇಕೆನಿಸುವಷ್ಟರಲ್ಲಿ ನೋವೊಂದು ಕರುಳ ಹಿಂಡಿ ಹಿಪ್ಪೆ ಮಾಡಿಬಿಡುತ್ತದೆ. ಅಭಿವ್ಯಕ್ತಿಸದಿರದಂತೆ ಮನಸ್ಸು ಸಂದೇಶವನ್ನು ರವಾನಿಸಿದ್ದಕ್ಕೆ ಪ್ರತಿಯಾಗಿ ವ್ಯಕ್ತಪಡಿಸಲಾರದ ಭಾವಗಳು ಅಲ್ಲೆಲ್ಲೋ ಚದುರಿ ಹೋಗಿಬಿಟ್ಟಿರುತ್ತವೆ. ಅಂತಹ ಕ್ಷಣದಲ್ಲೂ ಮುಖದಲ್ಲಿ ಮಂದಹಾಸ ಮೆತ್ತಗೆ ಸೂಸುತ್ತಿರುತ್ತದೆ. ಹಾ... ಅದೆಂತಹ ಮುಗ್ಧ ಭಾವವದು. ಎಂತಹ ಮುಗ್ಧತೆಯದು! ಎಂದು ಅವರಿವರು ಹೇಳುವುದನ್ನು ಕೇಳಿರುತ್ತೇವೆ. ಅದು ಹೇಗಿರುತ್ತದೆ ಎಂದು ಅತ್ತಿತ್ತ ಹುಡುಕುತ್ತಲೂ ಇರುತ್ತೇವೆ. ಆದರೆ ನಮ್ಮೊಳಗೇ ಇರುವ ಆ ಭಾವವನ್ನು ನಾವು ಅರಿಯದಿರುವುದು ಬಹು ದೊಡ್ಡ ವಿಪರ್ಯಾಸ. ಅವ್ಯಕ್ತ ಸುಖದೊಳಗಿನ ಬದುಕನ್ನು ಅನುಭವಿಸಲು ಮುಗ್ಧತೆಯು ಅನುವು ಮಾಡಿಕೊಡುತ್ತದೆ ಎನ್ನುವುದು ನಿಜವಷ್ಟೆ. ಹಾಗಾಗಿ ಮುಗ್ಧತೆಯೇ ಬದುಕಿನ ಜೀವಾಳ ಕಣ್ರೀ.

ನಮ್ಮ ಭಾವ, ನೋಟ, ಅನುಭವಗಳೆಲ್ಲವೂ ಸೆಟ್ ಆಫ್ ರೂಲ್ಸ್‌ಗಳ ಮೇಲೆ ನಿರ್ಧಾರಗೊಳ್ಳುತ್ತವೆ. ಅನುಕೂಲಕ್ಕೆ ತಕ್ಕಂತಿರುವ ಸೆಟ್ ಆಫ್ ರೂಲ್ಸ್‌ಗಳು ಅಗತ್ಯಕ್ಕನುಗುಣವಾಗಿ ಬದಲಾಗುತ್ತಲೂ ಇರುತ್ತವೆ. ಆದರೆ ನಿರ್ದಿಷ್ಟ ನಿಯಮಗಳನ್ನು ಸಾರ್ವಕಾಲಿಕವೆಂದು ಪರಿಗಣಿಸಬೇಕಾಗುತ್ತದೆ. ಅಂತಹ ನಿಯಮಗಳನ್ನು ಪಾಲಿಸಿಯೂ ಪಾಲಿಸದಂತಿದ್ದು ಸಂತಸದ ಕ್ಷಣಗಳನ್ನು ಕೈಯಾರೆ ದೂರವಾಗಿಸುತ್ತೇವೆ. ಬದುಕೆಂಬ ಸಂಭ್ರಮವನ್ನು ಆಚರಿಸಿಕೊಳ್ಳದೆ ಅದರ ಪಾಡಿಗೆ ಅದನ್ನು ಬಿಟ್ಟುಬಿಡುತ್ತೇವೆ. ನಮ್ಮ ಹಲವು ಯೋಚನೆಗಳು ವಿವಿಧ ಸಮಸ್ಯೆಗಳಿಗೆ ಹಾದಿಯಾಗುತ್ತದೆನ್ನುವುದರ ಅರಿವು ಆಗಾಗ ನಮ್ಮನ್ನು ಎಚ್ಚರಿಸುತ್ತಿದ್ದರೂ ಅದರತ್ತ ದೃಷ್ಟಿ ಹಾಯಿಸುವ ಕ್ಷಮತೆಯನ್ನು ತೋರುವುದಿಲ್ಲವಷ್ಟೆ. ಯಾವುದೇ ಅನುಕೂಲಗಳು ಇಲ್ಲದೇ ಇದ್ದ ಸಮಯದಲ್ಲೂ ಬದುಕನ್ನು ಖುಷಿಯಿಂದ ಅನುಭವಿಸಿದ್ದೇವೆ. ನೋವು ನಲಿವುಗಳನ್ನು ಹಂಚಿಕೊಂಡಿದ್ದೇವೆ. ನೋವುಗಳನ್ನು ತಲೆಯ ಮೇಲೆ ಹೊತ್ತು ಚಿಂತಾಕ್ರಾಂತರಾಗಿ ಕುಳಿತದ್ದಿಲ್ಲ, ದೂರುವುದಂತೂ ಅಭ್ಯಾಸವೇ ಇಲ್ಲ. ನಮಗೆ ನೆನಪಿರುವಂತೆ ಜೀವಿಸಬೇಕೆನ್ನಿಸುವುದೇ ಇಂತಹ ಘಟ್ಟದಲ್ಲಿ. ಆದರಿಂದು ಜಾದೂ ಬಗೆಯ ಸವಲತ್ತುಗಳನ್ನು ಹೊಂದಿದ್ದರೂ ಚಿಂತೆಯೇನೂ ಮಾಸಿಲ್ಲ, ದೂರುವುದಂತೂ ನಿಂತೇ ಇಲ್ಲ. ಇದು ಮುಗ್ಧತೆಯನ್ನು ಕಳೆದುಕೊಂಡಿರುವುದರ ಲಕ್ಷಣವೇ?

ಮುಗ್ಧತೆಯೇ ಒಡಲಾಳವಾಗಿರುವ ಪ್ರತಿ ಬೆಳಕಿನ ಕೌತುಕ ಮತ್ತು ಪ್ರತಿ ಕತ್ತಲೆಯ ವಿಸ್ಮಯಗಳು ಬದುಕಿನ ಮೂಸೆಯಲ್ಲಿ ಹರಿಯುವ ನಿತ್ಯ ಜೀವದ್ರವ್ಯಗಳು. ನೀಲಾಂಬರವು ಮಲಗೆದ್ದು

